
# ಗುರುನಾನಕರ ದೂರದೃಷ್ಟಿ

■ ಬಿ. ಪಾಂಡುರಂಗಯ್ಯ, ದಾವಣಗೆರೆ



ಚಿತ್ರ: ಶಶಿಧರ್ ಹಳೇಮನಿ

ಸುಮಾರು ಏಳು ಶತಮಾನಗಳ ಹಿಂದೆ ಗುರುನಾನಕರು ಸಿಖ್ ಧರ್ಮವನ್ನು ಸ್ಥಾಪಿಸಿದರು. ಅವರು ಬಹುಭಾಷಾ ವಿಶಾರದರೂ, ವಿದ್ಯಾವಿನಯ ಸಂಪನ್ನರೂ, ಮಹಾಮಾನವತಾವಾದಿಯೂ ಮತ್ತು ದೂರದೃಷ್ಟಿಯುಳ್ಳವರೂ ಆಗಿದ್ದರು. ಒಮ್ಮೆ ತಮ್ಮ ಧರ್ಮ ಪ್ರಚಾರದ ಸಲುವಾಗಿ ತಮ್ಮ ಶಿಷ್ಯಂದಿರೊಂದಿಗೆ ಲೋಕ ಸಂಚಾರ ಮಾಡುತ್ತಿದ್ದಾಗ ಒಂದು ಹಳ್ಳಿಗೆ ಬಂದರು. ಆ ಹಳ್ಳಿಯ ಜನರು ಉದಾರಿಗಳೂ, ಸಜ್ಜನರೂ ಮತ್ತು ಸಾಧುಸಂತರ ಬಗ್ಗೆ ಭಯಭಕ್ತಿಯುಳ್ಳವರೂ ಆಗಿದ್ದರು. ಅವರು ಗುರುನಾನಕರನ್ನೂ ಮತ್ತು ಅವರ ಶಿಷ್ಯಂದಿರನ್ನೂ ಗೌರವಾದರಗಳಿಂದ ಬರ ಮಾಡಿಕೊಂಡು ಭೂರಿ ಭೋಜನವನ್ನು ಸಿದ್ಧಪಡಿಸಿ, ಅವರಿಗೆ ಹೊಟ್ಟೆ ತುಂಬಾ ಊಟ ಬಡಿಸಿದರು. ಅವರಿಗೆ ಮೆತ್ತನೆಯ ಹಾಸಿಗೆಗಳನ್ನು ಹಾಸಿ ವಿಶ್ರಾಂತಿ ತೆಗೆದುಕೊಂಡು ಪ್ರಯಾಣದ ಆಯಾಸವನ್ನು ಪರಿಹರಿಸಿಕೊಳ್ಳಲು ವಿನಂತಿಸಿಕೊಂಡರು. ಎಲ್ಲಾ ಆದ ಮೇಲೆ ಕೆಲಕಾಲ ತಮ್ಮ ಹೊಸಧರ್ಮದ ಮುಖ್ಯ ವಿಷಯಗಳನ್ನು ಗುರುನಾನಕರು ಬೋಧಿಸಿದರು. ದೇವರು ಒಬ್ಬನೇ, ನಾವೆಲ್ಲಾ ಅವನ ಮಕ್ಕಳು; ಎಲ್ಲರೂ ಅಣ್ಣ ತಮ್ಮಂದಿರಂತೆ ಪ್ರೀತಿ ಪ್ರೇಮಗಳಿಂದ ಬಾಳಬೇಕು. ಯಾರೂ ಮೇಲಲ್ಲ, ಯಾರೂ ಕೀಳಲ್ಲ. ನೀವೆಲ್ಲಾ ಸಮರಸದಿಂದ ಬಾಳಬೇಕು ಎಂದು ಉಪದೇಶಿಸಿದರು.

ಗುರುನಾನಕರು ಆ ಹಳ್ಳಿಯನ್ನು ಬಿಟ್ಟು ಹೋಗುವಾಗ ಅಲ್ಲಿ ನೆರೆದಿದ್ದ ಸಜ್ಜನರಿಗೆ ವಿಚಿತ್ರ ರೀತಿಯಲ್ಲಿ ಹೀಗೆ ಆಶೀರ್ವದಿಸಿದರು. ನಿಮ್ಮ ಈ ಹಳ್ಳಿ ನಾಶವಾಗಿ ಹೋಗಲಿ. ನೀವೆಲ್ಲಾ ಕೂಪ ಮಂಡೂಕಗಳಂತೆ ಈ ಹಳ್ಳಿಯಲ್ಲೇ ವಾಸಿಸದೇ, ಬೇರೆಬೇರೆ ಹಳ್ಳಿಗಳಿಗೆ ವಲಸೆ ಹೋಗಿ ಅಲ್ಲಿಯೇ ಜನರೊಡನೆ ಬೆರೆತು ಚೆನ್ನಾಗಿ ಬಾಳಿರಿ! ಗುರುನಾನಕರ ಶಿಷ್ಯರಿಗೆ ತಮ್ಮ ಗುರುಗಳ ವಿಚಿತ್ರ ಆಶೀರ್ವಾದದಿಂದ ಬಹುಬೇಸರ ಉಂಟಾಯಿತು. ಇಲ್ಲಿಯ ಜನರು ತಮ್ಮನ್ನೆಲ್ಲಾ ಎಷ್ಟು ಚೆನ್ನಾಗಿ ಕಂಡು ಅತ್ಯುತ್ತಮ ಆತಿಥ್ಯವನ್ನು ನೀಡಿದ್ದಾರೆ! ಅಂಥವರಿಗೆ ಗುರುಗಳು ಇದೆಂತಹ ಆಶೀರ್ವಾದ ನೀಡಿದ್ದಾರೆ! ಇದೇನು ಆಶೀರ್ವಾದವೋ ಅಥವಾ ಶಾಪವೋ! ಆದರೆ ಗುರುಗಳನ್ನು ಪ್ರಶ್ನಿಸುವ ಧೈರ್ಯ ಯಾವ ಶಿಷ್ಯನಲ್ಲೂ ಇರಲಿಲ್ಲ!

ಕೆಲವು ದಿನಗಳ ನಂತರ ಗುರುನಾನಕರು ಅದೇ ಶಿಷ್ಯರೊಂದಿಗೆ ಸಂಚರಿಸುತ್ತಾ ಬೇರೊಂದು ಹಳ್ಳಿಗೆ ತಮ್ಮ ಹೊಸ ಧರ್ಮದ ಬಗ್ಗೆ ಪ್ರವಚನ ನೀಡಲು ಹೋದರು. ಆ ಹಳ್ಳಿಯ ಜನರು ಹುಂಬರೂ, ಸ್ವಾರ್ಥಿಗಳೂ ಮತ್ತು ಒರಟರೂ ಆಗಿದ್ದರು. ಆ ಹಳ್ಳಿಯಲ್ಲಿ ಒಬ್ಬ ಸಜ್ಜನನೂ ಇರಲಿಲ್ಲ. ಅವರು ಗುರುನಾನಕರು ಮತ್ತು ಅವರ ಶಿಷ್ಯಂದಿರನ್ನು ಸ್ವಾಗತಿಸುವುದಿರಲಿ, ಅವರನ್ನು ಹಳ್ಳಿಯೊಳಕ್ಕೆ ಕಾಲಿಡದಂತೆ ನಿರ್ಬಂಧಿಸಿದರು; ಅಷ್ಟೇ ಅಲ್ಲದೇ, ಬಾಯಿಗೆ ಬಂದಂತೆ ಬೈದರು; ನೆಲದ ಮೇಲೆ ಬಿದ್ದಿದ್ದ ಇಟ್ಟಿಗೆ ಚೂರು ಮತ್ತು ಕಲ್ಲುಗಳನ್ನು ಕೈಗೆತ್ತಿಕೊಂಡು ಅವರತ್ತ ಬೀಸತೊಡಗಿದರು. ಗುರುನಾನಕರು ತಮ್ಮ ತಾಳ್ಮೆಯನ್ನು ಕಳೆದುಕೊಳ್ಳಲಿಲ್ಲ. ಮುಗುಳ್ನಗುತ್ತಾ ಆ ಹಳ್ಳಿಯ ದುಷ್ಟ ಜನರಿಗೆ ಈ ರೀತಿ ಆಶೀರ್ವದಿಸಿದರು. 'ನಿಮ್ಮ ಹಳ್ಳಿ ಅಭಿವೃದ್ಧಿ ಹೊಂದಲಿ, ನಿಮ್ಮ ಸಂಖ್ಯೆ ಹೆಚ್ಚಾಗಲಿ. ಈ ಹಳ್ಳಿಯ ಗಡಿಯನ್ನು ಎಂದೂ ದಾಟಿ ಹೋಗಬೇಡಿ ಇಲ್ಲಿಯೇ ನಿಮ್ಮ ಜೀವನ ಪರ್ಯಂತ ಬಾಳಿ ಬದುಕಿರಿ'. ಈಗಂತೂ ಗುರುನಾನಕರ ಶಿಷ್ಯರಿಗೆ ಅವರ ಬಗ್ಗೆ ವಿಪರೀತ ಕೋಪ ಬಂತು. ಆ ಹಳ್ಳಿಯಿಂದ ಹೊರ ಬಂದ ನಂತರ ಅವರು ತಮ್ಮ ಕೋಪ ಮತ್ತು ಅಸಮಾಧಾನಗಳನ್ನು ಹೊರ ಹಾಕಿದರು. ಗುರುಗಳೇ, ಇದೆಂತಹ ನ್ಯಾಯ ನಿಮ್ಮದು? ಈ ಹಿಂದೆ ಹೋದ ಹಳ್ಳಿಯವರು ಎಂಥಾ ಸಜ್ಜನರಾಗಿದ್ದರು. ನಮ್ಮನ್ನೆಲ್ಲಾ ಪ್ರೀತಿ– ಪ್ರೇಮ, ಗೌರವಾದರಗಳಿಂದ ಕಂಡು ಅತ್ಯುತ್ತಮ ಆದರಾತಿಥ್ಯಗಳನ್ನು ನೀಡಿದರು. ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಹಿತವಚನಗಳನ್ನು ಗಮನವಿಟ್ಟು ಶಾಂತ ಚಿತ್ತದಿಂದ ಆಲೈಸಿದರು. ಆದರೆ ಅವರಿಗೆ ಆಶೀರ್ವಾದ ರೂಪದಲ್ಲಿ ನೀವು ನೀಡಿದ್ದು ಶಾಪ. ನಿಮ್ಮ ಹಳ್ಳಿ ನಾಶವಾಗಲಿ ನೀವು ರಾಜ್ಯದ ಬೇರೆಬೇರೆ ಹಳ್ಳಿಗಳಿಗೆ ವಲಸೆ ಹೋಗಿ ಅಲ್ಲಿ ವಾಸಿಸಿರಿ ಎಂದಿರಿ. ಆದರೆ ನಮ್ಮನ್ನೆಲ್ಲಾ ಕಲ್ಲುಗಳಿಂದ ಹೊಡೆದೋಡಿಸಿದ ಈ ಹಳ್ಳಿಯ ದುಷ್ಟ ಮತ್ತು ಅನಾಗರಿಕ ಜನರಿಗೆ, ನಿಮ್ಮ ಸಂಖ್ಯೆ ವೃದ್ಧಿಸಲಿ, ಬೇರೆ ಎಲ್ಲಿಗೂ ವಲಸೆ ಹೋಗದೆ ಇಲ್ಲಿಯೇ ಬಾಳಿ ಬದುಕಿರಿ ಎಂದು ಆಶೀರ್ವದಿಸಿದಿರಿ. ಆ ಹಳ್ಳಿಯವರಿಗೆ ಶಾಪ, ಇವರಿಗೆ ವರ! ನಿಮ್ಮದು ಇದೆಂತಹ ಇಬ್ಬಗೆಯ ನೀತಿ ಗುರುಗಳೇ? ಗುರುನಾನಕರು ಮುಗುಳ್ನಗುತ್ತಾ ಉತ್ತರಿಸಿದರು ನನ್ನ ಪ್ರೀತಿಯ ಶೀಷ್ಯಂದಿರಾ! ನಿಮ್ಮ ಕೋಪತಾಪಗಳ ಅರಿವು ನನಗೆ ಚೆನ್ನಾಗಿ ಆಗುತ್ತಿದೆ. ಆದರೆ ನನ್ನೆಲ್ಲಾ ಮಾತುಗಳ ಹಿಂದಿನ ನಿಜವಾದ ಅರ್ಥ ಮತ್ತು ರಹಸ್ಯಗಳ ಅರಿವು ನಿಮಗೆ ಆಗದಿದ್ದುದರಿಂದಲೇ ಇಷ್ಟೆಲ್ಲಾ ಗೊಂದಲಗಳಿಗೆ ಕಾರಣವಾಗಿದೆ. ಸಜ್ಜನರು ಒಂದೇ ಕಡೆ ಇರಬಾರದು. ಬೇರೆಬೇರೆ ಹಳ್ಳಿಗಳಿಗೆ ವಲಸೆ ಹೋಗಿ ನೆಲೆಸಿದರೆ, ಅಲ್ಲಿಯ ಜನರು ಇವರ ಸದ್ಗುಣಗಳಿಂದ ಪ್ರಭಾವಿತರಾಗಿ ಸುಸಂಸ್ಕೃತರಾಗಿ ತಮ್ಮ ಬದುಕನ್ನು ಹಸನುಗೊಳಿಸಿಕೊಳ್ಳುತ್ತಾರೆ ಮತ್ತು ಒಳ್ಳೆಯತನ ಹರಡುತ್ತದೆ! ಹಾಗೆಯೇ ದುರ್ಜನರು, ಅನಾಗರಿಕರು, ಬೇರೆಡೆ ಹೋಗಿ ನೆಲೆಸಿದರೆ, ಆ ಹಳ್ಳಿಯ ಜನರು ಇವರ ದುರ್ಗುಣಗಳನ್ನು ಕಲಿತುಕೊಂಡು ತಮ್ಮ ಬಾಳನ್ನು ನರಕ ಸದೃಶವನ್ನಾಗಿಸಿಕೊಳ್ಳುವ ಸಂಭಾವ್ಯತೆ ಇರುತ್ತದೆ ಮತ್ತು ಕೆಡಕು ಹರಡುತ್ತದೆ. ಆದ್ದರಿಂದ ಅವರು ಇದ್ದಲ್ಲಿಯೇ ಇರುವುದು ಅವರಿಗೂ ಮತ್ತು ಬೇರೆಯವರಿಗೂ ಕ್ಷೇಮ! ನೀವೆಲ್ಲಾ ನನ್ನ ವಿವರಣೆಯನ್ನು ಒಪ್ಪುತ್ತೀರಿ ತಾನೇ? ತಮ್ಮ ಗುರುಗಳ ಮಾತುಗಳ ಹಿಂದಿನ ರಹಸ್ಯವನ್ನು ಅರಿತುಕೊಂಡ ಶಿಷ್ಯಂದಿರು ಸಂತುಷ್ಟರಾದರು; ತಮ್ಮ ಗುರುಗಳ ದೂರದೃಷ್ಟಿ ಮತ್ತು ಜ್ಞಾನಗಳನ್ನು ಅವರು ಬಾಯ್ತುಂಬಾ ಹೊಗಳಿದರು! ■